ಅ) ಆಯವ್ಯಯ ಚರ್ಚೆ ವೇಳೆಯಲ್ಲಿ ನೀಡಿದ್ದ ಆಶ್ವಾಸನೆ ಇಲಾಖೆಯ ಗಮನಕ್ಕೆ ಬಂದಿಲ್ಲ, ಹಾಗೂ ಪ್ರಸ್ತಾವನೆ ಸರ್ಕಾರದಲ್ಲಿ ಬಾಕಿಯಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಭೂಸೇನೆ ನಿಗಮದ ಕಟ್ಟಡಗಳ ಕಳಪೆ ನಿರ್ಮಾಣ

199 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಭೂ ಸೇನೆಗೆ ಸರ್ಕಾರ ವಹಿಸಿರುವ ಕಟ್ಟಡಗಳ ಗುಣಮಟ್ಟ ತೀರಾ ಕಳಪೆಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಆ) ಭೂ ಸೇನೆಯು ವಹಿಸಿಕೊಂಡಿರುವ ಕಟ್ಟಡಗಳ ಅಂದಾಜು ವೆಚ್ಚ ಲೋಕೋಪಯೋಗಿ ಇಲಾಖಾ ಕಟ್ಟಡಗಳ ಅಂದಾಜಿಗಿಂತ ಹೆಚ್ಚಾಗಿಲ್ಲವೆ?

ಇ) ಕರ್ನಾಟಕ ಭೂ ಸೇನೆಯು ತನ್ನ ಇಲಾಖೆ ಮತಿಯಿಂದ ಕಟ್ಟಡ ನಿರ್ಮಾಣ ಕೆಲಸ ಕೈಗೊಳ್ಳುತ್ತಿದೆಯೇ ಅಥವಾ ಸಬ್ ಕಂಟ್ರಾಕ್ಟ್ ಕೊಟ್ಟು ಕೆಲಸ ಮಾಡಿಸುತ್ತಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಹೌದು. ಕಾರಣ, ಭೂ ಸೇನಾ ನಿಗಮದ ಅಂದಾಜು ಪಟ್ಟಿಯಲ್ಲಿ ನಿರ್ವಹಣಾ ವೆಚ್ಚವು ಸೇರಿರುವುದರಿಂದ.

ಇ) ಭೂ ಸೇನಾ ನಿಗಮವು ಇಲಾಖಾ ಮತಿಯಿಂದ ಮಾತ್ರ ಕಾಮಗಾರಿಗಳನ್ನು ನಿರ್ವಹಿಸುತ್ತಿವೆ.

ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳನ್ನು ಖಾಸಗಿಯವರಿಗೆ ವಹಿಸುವುದರ ಬಗ್ಗೆ

198 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರ ತನ್ನ ಒಡೆತನದ ಯಾವ ಯಾವ ಕಾರ್ಖಾನೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲು ಯೋಜಿಸಿದೆ.

ಆ) ನಷ್ಟದಲ್ಲಿ ನಡೆಯುತ್ತಿರುವ ಕಾರ್ಖಾನೆಗಳೆಷ್ಟು ಮತ್ತು ಪ್ರತಿ ಕಾರ್ಖಾನೆಯ ನಷ್ಟದ ಮೊಬಲಗೆಷ್ಟು?

ಇ) ಸರ್ಕಾರಿ ಒಡೆತನದ ಕಾರ್ಖಾನೆಗಳು ಅನೇಕ ವರ್ಷಗಳಿಂದ ನಷ್ಟ ಅನುಭವಿಸುತ್ತಿರುವುದಕ್ಕೆ ಕಾರಣಗಳನ್ನು ಕಂಡುಹಿಡಿಯಲಾಗಿದೆಯೇ ಹಾಗೂ ಅವುಗಳ ಪುನಶ್ಚೇತನ ಸಾಧ್ಯವಿಲ್ಲವೇ?

ಶ್ರೀ ರಾಮಲಿಂಗಾರೆಡ್ಡಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು):

ಅ) ರಾಜ್ಯದ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಬೇಕೇ ಅಥವಾ ಬೇಡವೇ ಎಂಬ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 17

ಅನುಬಂಧದಲ್ಲಿ ನೀಡಲಾಗಿದೆ.

[illegible]